ಇ.ಎಸ್.ಐ. ಆಸ್ಪತ್ರೆಯಲ್ಲಿ ಔಷಧಿ ಕೊಡುತ್ತಾರಲ್ಲ, 1½ ಕೋಟಿ ರೂ.ಗಳ ಔಷಧಿಗಳು ಔಟ್ ಡೇಟೆಡ್ ಆಗಿವೆ. ಔಷಧಿ ಇಲ್ಲ ಆಸ್ಪತ್ರೆಯಲ್ಲಿ ಎಂದು ಕೇಳುತ್ತಾರೆ, ಇವರು ಕೊಡುವುದಿಲ್ಲ. ಇದು ಎಲ್ಲಿಯವರೆಗೆ? ಇದರ ಬಗ್ಗೆ ಅಕೌಂಟಬಿಲಿಟಿ ಕೇಳಬೇಕು. ಈ ಬಗ್ಗೆ ನನ್ನ ಸಲಹೆ ಏನೆಂದರೆ ತಾವು ದಯಮಾಡಿ ದೊಡ್ಡ ದೊಡ್ಡ ಆಸ್ಪತ್ರೆಗಳು ಯಾವುವಿವೆ, ಅವುಗಳಿಗೆ ಒಂದು ವಾರಕ್ಕೊಮ್ಮೆ ನೀವು ಯಾರಿಗೂ ಹೇಳದೇ ಸುಮ್ಮನೇ ಭೇಟಿ ಕೊಟ್ಟು ಅಲ್ಲಿಯ ಪರಿಸ್ಥಿತಿ ಬಗ್ಗೆ ಅಬ್ಸರ್ವ್ ಮಾಡಿ. ಈಗ ಏನು ಮಾಡುವುದು ಏನ್ನುವುದೇ ಅರ್ಥವಾಗುವುದಿಲ್ಲ. Nobody is accountable in the Government hospitals. You make them accountable.

ಶ್ರೀ ಚಿಂದ್ರಕಾಂತ್ ಸಿ. ಬೆಲ್ಲದ್ : ಧಾರವಾಡದಲ್ಲಿರುವ ಸಿವಿಲ್ ಆಸ್ಪತ್ರೆಯಲ್ಲಿ ವಿಸಿಟರ್ಸ್ ಬೋರ್ಡ್‌ನ್ನು ಕಳೆದ 2 ವರ್ಷಗಳಿಂದಲೂ ಮಾಡಿಲ್ಲ. ಅಲ್ಲಿ ಶಾಸಕರು ಇದ್ದ ವಿಸಿಟರ್ಸ್ ಬೋರ್ಡ್ ಇದ್ದರೆ, ಏನಾದರೂ ಕೆಲಸ ಸ್ವಲ್ಪ ಚೆನ್ನಾಗಿ ನಡೆಯುತ್ತದೆ.

ಅಧ್ಯಕ್ಷರು : ವಿಸಿಟರ್ಸ್ ಬೋರ್ಡ್ ಬಗ್ಗೆ ತಮಗೆಲ್ಲಾ ಗೊತ್ತೇ ಇದೆ. ಅಲ್ಲೂ ಕೂಡ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಾರೆ. ಅದೂ ಕೂಡ ಸಮಸ್ಯೆಯೇ. ಎಲ್ಲದಕ್ಕೂ ಕೂಡ ಪ್ರಾಬ್ಲಮ್ ಇದೆ.

(ಖಂ) ಬಿಜಾಪುರ ಜಿಲ್ಲೆಯ ಜಂಬಗಿ ಕೆರೆಯಲ್ಲಿ ಅತಿವೃಷ್ಟಿಯಿಂದ ಕೊಚ್ಚಿಕೊಂಡು ಹೋಗುತ್ತಿದ್ದ ವ್ಯಕ್ತಿಯನ್ನು ಉಳಿಸಲಿಕ್ಕೆ ಹೋದ ಹುಡುಗ ಸಾವನ್ನಪ್ಪಿದ್ದು ಈತನ ವಾರಸುದಾರರಿಗೆ ಇನ್ನೂ ಪರಿಹಾರ ಧನ ಕೊಡದಿರುವ ಬಗ್ಗೆ.

ಶ್ರೀ ಎಸ್. ಶಿವಾನಂದ ಪಾಟೀಲ್ (ತಿಕೋಟಾ) : ಮಾನ್ಯ ಅಧ್ಯಕ್ಷರೇ, ದಿನಾಂಕ 12-09-96ರಂದು ಬಿಜಾಪುರ ಜಿಲ್ಲೆಯಲ್ಲಿ ತುಂಬಾ ಅತಿವೃಷ್ಟಿಯಾಯಿತು. ಆ ಸಂದರ್ಭದಲ್ಲಿ ಬಿಜಾಪುರ ತಾಲ್ಲೂಕಿನ ಜಂಬಗಿ ಕೆರೆಯಲ್ಲಿ ಬಸಪ್ಪ ಎನ್ನುವವನು ಕೊಚ್ಚಿಕೊಂಡು ಹೋದ. ಆದೇ ಸಂದರ್ಭದಲ್ಲಿ ಅಣ್ಣಾ ಸಾಹೇಬ್ ಲೋಗಾಯಿ ಎನ್ನುವವನು ಆತನನ್ನು ಉಳಿಸುವುದಕ್ಕೆ ಹೋಗಿ, ಅವನೂ ಕೂಡ ಕೆರೆಯಲ್ಲಿ ಕೊಚ್ಚಿಕೊಂಡು ಹೋದ. ಮೊದಲು ತೀರಿಕೊಂಡ ಹುಡುಗನಿಗೆ ಸಂಬಂಧಪಟ್ಟಂತೆ ಪರಿಹಾರ ಧನವನ್ನು ಜಿಲ್ಲಾಧಿಕಾರಿಯವರು ಪರಿಹಾರ ನಿಧಿಯಿಂದ ಕೊಟ್ಟಿದ್ದಾರೆ. ಆದರೆ ಆತನನ್ನು ಉಳಿಸುವುದಕ್ಕೆ ಹೋದ ಲೋಗಾಯಿ ವಾರಸುದಾರರಿಗೆ ಇದುವರೆಗೆ ಪರಿಹಾರ ಧನವನ್ನು ಕೊಟ್ಟಿಲ್ಲ. ಈಗಗಾಲೇ 6ತಿಂಗಳುಗಳಾಗಿದೆ. ಈ ಪರಿಹಾರ ಧನವನ್ನು ಕೊಡುವುದರಲ್ಲಿ ಏನಾದರೂ ತಾರತಮ್ಯವಿದೆಯೇ? ಈಗ ಇರುವ ಆತನ ತಂಗಿಯೇ ವಾರಸುದಾರಳು ಎಂಬುವುದಕ್ಕೆ ಕೋರ್ಟನಲ್ಲಿ ಅಫಿಡೆವಿಟ್ ಮಾಡಿ ಅದನ್ನು ಪ್ರೂವ್ ಮಾಡಿ ಅದಕ್ಕೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳು ದಾಖಲಾತಿಯನ್ನು ಕೂಡ ಕೊಟ್ಟಿದ್ದಾರೆ. ಆದುದರಿಂದ ದಯಮಾಡಿ ಸರ್ಕಾರದವರು ಇದನ್ನು ತೀವ್ರವಾಗಿ ಗಣನೆಗೆ ತೆಗೆದುಕೊಂಡು ಪರಿಹಾರ ಧನವನ್ನು ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಲು ಇಚ್ಛಿಪಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಸದನದ ಮುಖಾಂತರ ಈ ವಿಷಯವನ್ನು ಸರ್ಕಾರದ ಗಮನಕ್ಕೆ ಏನು

ತಂದಿದ್ದಾರೆ, ಇದರ ಬಗ್ಗೆ ಕಂದಾಯ ಮಂತ್ರಿಗಳ ಜೊತೆ ಮಾತನಾಡಿ ಈ ದಿವಸವೇ ಈ ವಿಷಯದ ಬಗ್ಗೆ ವಸ್ತು ಸ್ಥಿತಿಯನ್ನು ತರಿಸಿಕೊಂಡು ಪರಿಹಾರ ಕೊಡುವಂಥ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತೇನೆ.

(ಖೂ) ಧಾರವಾಡ ಜಿಲ್ಲೆಯಲ್ಲಿ ಗ್ರಾಮ ವ್ಯವಸಾಯ ಸೇವಾ ಸಹಕಾರ ಸಂಘಗಳನ್ನು ಪುನರ್ವಿಂಗಡಣೆ ಮಾಡುವಾಗ ವಿರೋಧ ಪಕ್ಷದ ಶಾಸಕರ ಜೊತೆ ಸಮಾಲೋಚನೆ.

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯಲ್ಲಿ ಗ್ರಾಮ ವ್ಯವಸಾಯ ಸೇವಾ ಸಹಕಾರ ಸಂಘಗಳನ್ನು ಪುನರ್ವಿಂಗಡಣೆ ಮಾಡಿ ನಾಮಕರಣ ಮಾಡುವುದಕ್ಕಾಗಿ ಉಪ ನಿಬಂಧಕರಿಗೆ ಸರ್ಕಾರ ಸುತ್ತೋಲೆಯನ್ನು ಹೊರಡಿಸಿದೆಯೆಂದು ತಿಳಿದುಬಂದಿದೆ. ಆದರೆ ಅಲ್ಲಿಯ ಉಪ ನಿಬಂಧಕರು ಯಾವುದೇ ವಿರೋಧ ಪಕ್ಷದ ಶಾಸಕರನ್ನು ಇದರ ಬಗ್ಗೆ ವಿಚಾರ ಮಾಡದೇ ಕೇವಲ ಜನತಾ ದಳದವರನ್ನು ಮಾತ್ರ ಕರೆದು ಇದರ ಬಗ್ಗೆ ವಿಚಾರ ಮಾಡಿ ನಾಮಕರಣ ಮಾಡುವಂಥ ಕ್ರಮವನ್ನು ತೆಗೆದುಕೊಂಡಿದ್ದಾರೆಂದು ತಿಳಿದುಬಂದಿದೆ. ಈ ಬಗ್ಗೆ ಮಾನ್ಯ ಸಹಕಾರ ಸಚಿವರಿಗೆ ನಾನು ಕೇಳುವುದೇನೆಂದರೆ ವಿರೋಧ ಪಕ್ಷದ ಶಾಸಕರನ್ನು ತಾಲ್ಲೂಕಿನಲ್ಲಿರುವ ಗ್ರಾಮ ವ್ಯವಸಾಯ ಸೇವಾ ಸಹಕಾರ ಸಂಘಗಳನ್ನು ಪುನರ್ವಿಂಗಡಣೆ ಮಾಡುವಾಗ ಇದರ ಬಗ್ಗೆ ಸಮಾಲೋಚನೆ ಮಾಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಸುಮಾರು ಮೂರ್ನಾಲ್ಕು ವರ್ಷಗಳ ಹಿಂದೆ ನಮ್ಮ ಜಿಲ್ಲೆಯಲ್ಲಿ ಪುನರ್ವಿಂಗಡಣೆಯಾಗಿತು. ಈಗ ಮತ್ತೆ ಮಾನ್ಯ ಸಹಕಾರ ಸಚಿವರು ಮತ್ತೆ ಪುನರ್ವಿಂಗಡಣೆ ಮಾಡಬೇಕೆಂದು ಇಚ್ಛಿಪಟ್ಟಿದ್ದಾರೆ. ಈ ಹಿಂದೆ ಮೂರ್ನಾಲ್ಕು ವರ್ಷಗಳ ಹಿಂದೆ ಪುನರ್ವಿಂಗಡಣೆ ಮಾಡಿದಾಗ, ಅಲ್ಲಿ ಯಾರ್ಯಾರು ಶಾಸಕರಿದ್ದರೋ ಅವರನ್ನು ಕೇಳಿಯೇ ಮಾಡಲಾಗಿತ್ತು. ವಿರೋಧ ಪಕ್ಷದ ಶಾಸಕರನ್ನು ಕೂಡ ಕೇಳಿ ಮಾಡಲಾಗಿತ್ತು. ಆದರೆ ಈ ಬಾರಿ ವಿರೋಧ ಪಕ್ಷದ ಶಾಸಕರನ್ನು ಯಾರನ್ನೂ ಕೇಳಬಾರದು ಎಂದು ಮಾನ್ಯ ಸಚಿವರು ಮೌಖಿಕ ಆದೇಶವನ್ನು ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಈಗ ಸಚಿವರು ಮಾಡುವುದಿರಲಿ ಅಥವಾ ಮುಖ್ಯಮಂತ್ರಿಗಳು ಮಾಡುವುದಿರಲಿ ಆಗ ಅವರು ತಮಗೆ ತಿಳಿದ ಹಾಗೆ ಮಾಡಲಿ. ಆದರೆ ಸರ್ಕಾರಿ ಅಧಿಕಾರಿಗಳು ನಾಮಕರಣ ಮಾಡುವುದರಿಂದ ಅವರು ಒಂದು ಪದ್ಧತಿಯನ್ನು ಫಾಲೋ ಮಾಡಬೇಕಾಗುತ್ತದೆ. ಅವರು ಒಂದು ಪಕ್ಷದ ಏಜೆಂಟ್ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವಿಲ್ಲ. ಕಾನೂನಿನಲ್ಲಿ ಡೆಪ್ಯುಟಿ ರಿಜಿಸ್ಟ್ರಾರವರೇ ನಾಮಕರಣ ಮಾಡಬೇಕೆಂದು ಇದೆ. ಇವರು ಅಲ್ಲಿಯ ಜನ ಪ್ರತಿನಿಧಿಗಳನ್ನು ಕೇಳಿಯೇ ಮಾಡಬೇಕು. ಇಲ್ಲದಿದ್ದರೆ ಅಲ್ಲಿರುವ ಜನರಲ್ ಬಾಡಿ ಮೆಂಬರ್ಸ್‌ಗಳ ಅಭಿಪ್ರಾಯವನ್ನು ಪಡೆದು ಅದರಂತೆ ಮಾಡಬೇಕು. ಆ ರೀತಿಯಾದರೂ ಮಾಡಿಸಲಿ.

ಶ್ರೀ ಪಿ. ಸಿ. ಸಿದ್ದನಗೌಡರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಪಾಟೀಲರವರು ಹೇಳಿದ ಹಾಗೆ ಹಿಂದೆ ಇವ್ವತ್ತಿನ ವಿರೋಧ ಪಕ್ಷದ ನಾಯಕರಾದ ಮಾನ್ಯ ಬಿರ್ಗಯವರೂ ಕೂಡ ಕೋ-ಆಪರೇಟಿವ್ ಮಿನಿಸ್ಟರ್ ಆಗಿದ್ದರು. ಮಾನ್ಯ ಹೆಚ್.ಕೆ. ಪಾಟೀಲ್‌ರವರು ಇವ್ವಾಗ ನಮ್ಮ ಧಾರವಾಡ ಜಿಲ್ಲೆಯಲ್ಲಿ ಸಹಕಾರ ಸಂಘಗಳನ್ನು ಪುನರ್ವಿಂಗಡಣೆ ಮಾಡುವಾಗ ಅಥವಾ ಬೇರೆ ವಿಚಾರಗಳಲ್ಲಿ ಸಹಕಾರ ಸಂಘಗಳ ಬಗ್ಗೆ ಚರ್ಚೆ ಮಾಡಿರುವುದು ನಿಜ. ಆದರೆ ಶಹರದಲ್ಲಿರತಕ್ಕಂಥ ಕೋ-ಆಪರೇಟಿವ್